ಶ್ರೀ ರಾಜವರ್ಧನ.—ಮಾನ್ಯ ಸಭಾಪತಿಗಳೇ, ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ತುಮಕೂರು ಜಿಲ್ಲಾ ಕೇಂದ್ರದಲ್ಲಿ 8 ಹಾಸ್ಟೆಲುಗಳು ನಡೆಯುತ್ತಿವೆ. ಹಾಗೂ ಅದರಲ್ಲಿ ಸುಮಾರು 1,000 ಪರಿಜನ ವಿದ್ಯಾರ್ಥಿಗಳು ಇದ್ದಾರೆ. ಆದರೆ ಹಿಂದೆ 2 ಹಾಸ್ಟೆಲುಗಳನ್ನು ಕಟ್ಟಲು ಲೋಕೋಪಯೋಗಿ ಇಲಾಖೆಯವರಿಂದ ಎಸ್ಟಿಮೇಟ್ ಬಂದಿತ್ತು. ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್‌ಗಾಗಿ ಸರ್ಕಾರಕ್ಕೆ ಕಳುಹಿಸಿದ್ದ ಎಸ್ಟಿಮೇಟ್ ಪ್ರಕಾರ ಇವೆರಡಕ್ಕೂ 41 ಹಾಗೂ 31 ಲಕ್ಷ ರೂಪಾಯಿ ಆಗುತ್ತದೆ. ಆದರೆ 1982–83 ಹಾಗೂ 1983–84ರಲ್ಲಿ ಮೂರನೇ ಒಂದು ಭಾಗದಷ್ಟು ಹಣವನ್ನು ಸ್ಯಾಂಕ್ಷನ್ ಮಾಡುವುದಕ್ಕೆ ಸುಮಾರು 10 ಲಕ್ಷ ರೂಪಾಯಿ ಬೇಕಾಗಿದ್ದು, ಈಗ ಹಣದ ಕೊರತೆ ಇರುವುದರಿಂದ ಇದು ಆಗಲಿಲ್ಲ. ನಮ್ಮಲ್ಲಿ ಈ ಬಗ್ಗೆ ಇರುವ 24 ಲಕ್ಷ ರೂಪಾಯಿಯಲ್ಲಿ 10 ಲಕ್ಷ ರೂಪಾಯಿ ಇದಕ್ಕೇ ವಿನಿಯೋಗ ಮಾಡಿದರೆ ಬೇರೆ ಕಟ್ಟಡಗಳನ್ನು ಕಟ್ಟುವುದಕ್ಕೆ ತೊಂದರೆಯಾಗುತ್ತದೆಂದು ಹೇಳಿ ಇದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಮುಂದೆ ಹಣದ ಪರಿಸ್ಥಿತಿ ಸರಿಹೋದ ಮೇಲೆ ಇದನ್ನು ಮಂಜೂರು ಮಾಡುತ್ತೇವೆ.

ಶ್ರೀ ಸಿ. ಬೈರಪ್ಪಾಜಿ.—ಹಣದ ಪರಿಸ್ಥಿತಿ ಯಾವಾಗ ಸರಿಹೋಗುತ್ತದೆ? ಅಲ್ಲಿನ ಮಕ್ಕಳಿಗೆ ಸ್ಥಳದ ಅಭಾವ ಇದ್ದು ಬಹಳ ತೊಂದರೆಯಾಗುತ್ತಾ ಇದೆ. ಆದ್ದರಿಂದ ಎರಡು ಹಾಸ್ಟೆಲುಗಳನ್ನು ಕಟ್ಟಲು ಸರ್ಕಾರ ಬೇಗ ಕಾರ್ಯಕ್ರಮ ಹಾಕಿಕೊಳ್ಳಬೇಕು. ಪ್ರತಿ ವರ್ಷವೂ ಆರ್ಥಿಕ ತೊಂದರೆ ಇದ್ದೇ ಇದೆ.

ಉಪಾಧ್ಯಕ್ಷರು.—ಹಣದ ಕೊರತೆ ಇದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಸಿ. ಬೈರಪ್ಪಾಜಿ.—ಆಲ್ಲಿ ಸ್ವಂತ ಕಟ್ಟಡ ಇಲ್ಲದೇ ಮಕ್ಕಳಿಗೆ ತೊಂದರೆಯಾಗುತ್ತಿದೆ.

ಶ್ರೀ ರಾಜವರ್ಧನ.—ಈಗ ಅಲ್ಲಿ ಹಾಸ್ಟೆಲುಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು ವಿದ್ಯಾರ್ಥಿಗಳಿಗೆ ಯಾವ ತೊಂದರೆಯೂ ಆಗುತ್ತಿಲ್ಲ.

ಶ್ರೀ ವೈ. ರಾಮಕೃಷ್ಣ.—ಈಗಾಗಲೇ 8 ಹಾಸ್ಟೆಲುಗಳು ಇವೆ ಎಂದು ತಾವು ಹೇಳಿದ್ದೀರಿ. ಇವುಗಳಲ್ಲಿ ಸರ್ಕಾರಿ ಕಟ್ಟಡದಲ್ಲಿ ನಡೆಯುತ್ತಿರುವ ಹಾಸ್ಟೆಲುಗಳು ಎಷ್ಟು? ಹಾಗೂ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಹಾಸ್ಟೆಲುಗಳು ಎಷ್ಟು? ಇನ್ನು ಎರಡನೆಯದಾಗಿ ಮಾನ್ಯ ಮಂತ್ರಿಗಳು ಹಣದ ಅಭಾವದಿಂದಾಗಿ ಹಾಸ್ಟೆಲುಗಳನ್ನು ಕಟ್ಟುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಈಗ ಹಣ ಸಿಗುವುದಿಲ್ಲವೆಂದು ಇಟ್ಟುಕೊಳ್ಳಿ, ಆಗ ಹಾಸ್ಟೆಲುಗಳನ್ನು ಕಟ್ಟಿಸುವುದು ಬೇಡವೇ? ಆದ್ದರಿಂದ ಈಗ ಬಾಡಿಗೆ ಕಟ್ಟಡದಲ್ಲಿ ಏನು ಹಾಸ್ಟೆಲುಗಳು ನಡೆಯುತ್ತಿವೆ ಅವನ್ನು ಸರ್ಕಾರದವರೇ ಒತ್ತಾಯ ಮಾಡಿ ತೆಗೆದುಕೊಂಡು ಏಕೆ ನಡೆಸಬಾರದು?

ಶ್ರೀ ರಾಜವರ್ಧನ:—ಈಗ ಹಣವಿಲ್ಲವೆಂದು ಹೇಳಿ ಹಾಸ್ಟೆಲುಗಳನ್ನೇನೂ ನಿಲ್ಲಿಸಿಲ್ಲ. ಈಗ 8 ಹಾಸ್ಟೆಲುಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು ಇದರಿಂದ ವಿದ್ಯಾರ್ಥಿಗಳಿಗೇನೂ ತೊಂದರೆಯಾಗಿರುವುದಿಲ್ಲ. ಈಗ 8 ಹಾಸ್ಟೆಲುಗಳಲ್ಲಿ ಸುಮಾರು 1 ಸಾವಿರ ವಿದ್ಯಾರ್ಥಿಗಳು ವಾಸ ಮಾಡುತ್ತಿದ್ದಾರೆ. ಹಾಗೂ ತಾವು ಏನು ಹೇಳಿದಿರಿ ಆ ವಿಷಯವನ್ನು ನಾನು ಪರಿಶೀಲನೆ ಮಾಡಬೇಕಾಗುತ್ತದೆ.

ವಿಷಯ: ಮುಂಬೈಗೆ ನೇರ ಬಸ್ಸಿನ ಸೌಕರ್ಯವನ್ನೊದಗಿಸುವುದು.

ಪ್ರ. 221 (8) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).— ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ? :—

(ಅ) ಶಿವಮೊಗ್ಗ ಹರಿಹರ ಹುಬ್ಬಳ್ಳಿ ಮಾರ್ಗವಾಗಿ ಬೊಂಬಾಯಿಗೆ ನೇರ ಬಸ್ ವ್ಯವಸ್ಥೆ ಮಾಡಲಾಗುವುದೇ;

(ಆ) ಈ ಬಗ್ಗೆ ಕಳೆದ ಮೂರು ವರ್ಷಗಳಿಂದ ಸಾರ್ವಜನಿಕರ ಬೇಡಿಕೆ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು):—

(ಅ) ಸದ್ಯಕ್ಕೆ ಇಲ್ಲ.

(ಆ) ಹೌದು.

ಶ್ರೀ ಎಂ. ಆನಂದರಾವ್.—ಅಧ್ಯಕ್ಷರೇ, ಕಳೆದ 3 ವರ್ಷಗಳಿಂದ ಶಿವಮೊಗ್ಗ ಮತ್ತು ಸುತ್ತಮುತ್ತಲ ಜನ ಶಿವಮೊಗ್ಗದಿಂದ ಬಾಂಬೆಗೆ ನೇರ ಬಸ್ ಸೌಲಭ್ಯವನ್ನು ಒದಗಿಸಬೇಕೆಂದು ಆಗಾಗ ಮನವಿಯನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ. ಶಿವಮೊಗ್ಗದ ಜನರು ಹರಿಹರಕ್ಕೆ ಬಸ್‌ಗಾಗಿ ಹೋಗಬೇಕು. ಅಲ್ಲಿ ಜಾಗ ಸಿಗುವುದಿಲ್ಲ. ಅಲ್ಲಿಂದ ರೈಲಿನಲ್ಲಿ ಹೋಗಲೂ ಬಹಳ ಸಮಯ ಹಿಡಿಯುತ್ತದೆ. ಆದ್ದರಿಂದ ಶಿವಮೊಗ್ಗದಿಂದ ನೇರವಾಗಿ ಬಾಂಬೆಗೆ ಬಸ್ ಬಿಡುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮತ್ತು ಮಹಾರಾಷ್ಟ್ರ ಅಂತರರಾಜ್ಯ ಒಪ್ಪಂದದ ಮೇರೆಗೆ ಬಸ್ ರವಾನಿಗಳನ್ನು ಕೊಡಬೇಕಾಗುತ್ತದೆ. ನಿಗಮದ ವತಿಯಿಂದ ಈಗಾಗಲೇ 2 ಬಸ್‌ಗಳು ಚಿತ್ರದುರ್ಗ, ದಾವಣಗೆರೆ, ಹರಿಹರ ಮಾರ್ಗವಾಗಿ ಬೆಂಗಳೂರಿನಿಂದ ಮುಂಬೈಗೆ ಓಡಾಡುತ್ತಿವೆ. ಬೆಳಗಾಂ ಮತ್ತು ಕೊಲ್ಲಾಪುರ ಮಾರ್ಗವಾಗಿ ಮಂಗಳೂರಿನಿಂದ ಮುಂಬೈಗೆ ಬಸ್ ಹೋಗುತ್ತಿದೆ. ಹುಬ್ಬಳ್ಳಿಯಿಂದ ಎರಡು ಬಸ್‌ಗಳು ಹೋಗುತ್ತಿವೆ. ಇದೇ ರೀತಿ ಮಹಾರಾಷ್ಟ್ರದವರೂ ಕೂಡ ತಮ್ಮ ಬಸ್‌ಗಳನ್ನು ವಿರುದ್ಧ ದಿಕ್ಕಿನಲ್ಲಿ ಬಿಡುತ್ತಿದ್ದಾರೆ. ಈ ಕಡೆಯ ಜನ ಹರಿಹರದಲ್ಲಿ ಆಗಲೀ, ಹುಬ್ಬಳ್ಳಿಯಲ್ಲಾಗಲೀ ಬಸ್ಸನ್ನು

ಹಿಡಿದು ಹೋಗಬಹುದಾಗಿದೆ. ಮಂದೆ ಅಂತರರಾಜ್ಯ ಒಪ್ಪಂದ ಆಗುವವರೆಗೆ ಶಿವಮೊಗ್ಗದಿಂದ ಬಾಂಬೆಗೆ ಬಸ್ ಹಾಕುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಎಂ. ಆನಂದರಾವ್.—ಆ ಬಸ್‌ಗಳಲ್ಲಿ ಸೀಟ್ ಸಿಗುವುದಿಲ್ಲ. ಆದ್ದರಿಂದ ಕೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಕೇಳುತ್ತಿರುವುದು ಸ್ವಾಮಿ.

ಶ್ರೀ ಎಂ. ಪಿ. ಪ್ರಕಾಶ್.—ಈ ವಿಷಯವನ್ನು ಪರಿಶೀಲಿಸಲಾಗುವುದು.

ವಿಷಯ: ವಸತಿಕಾರ್ಯಕ್ರಮಕ್ಕಾಗಿ ಗೊತ್ತುಪಡಿಸಿದ ನಿಧಿ.

ಪ್ರ. 224 (20) ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ? :—

(ಅ) 1983–84 ರ ಸಾಲಿಗೆ ಕರ್ನಾಟಕ ರಾಜ್ಯದಲ್ಲಿ ಮಂಜೂರು ಮಾಡಲ್ಪಟ್ಟಿರುವ ವಸತಿ ಯೋಜನೆಗಳಿಗೆ (ಹುಡ್ಕೋ ಧನ ಸಹಾಯ, ಬ್ಯಾಂಕ್ ಧನ ಸಹಾಯ ಹಾಗೂ ಪ್ರಯೋಗಾತ್ಮಕ ಕಡಿಮೆ ವೆಚ್ಚದ ಮನೆಗಳು) ಒದಗಿಸಿರುವ ಹಣದ ಮೊತ್ತವೆಷ್ಟು ;

(ಆ) ಈ ವಸತಿ ಯೋಜನೆಗಳಡಿಯಲ್ಲಿ ರಾಜ್ಯದಲ್ಲಿ ಈವರೆಗೆ ಖರ್ಚು ಮಾಡಲ್ಪಟ್ಟಿರುವ ಹಣವೆಷ್ಟು (ವಿವಿಧ ಯೋಜನೆಗಳನ್ವಯ ವಿವರಗಳನ್ನು ದಯಮಾಡಿ ಒದಗಿಸುವುದು) ;

(ಇ) 1982–83ನೇ ಸಾಲಿಗೆ ಹುಡ್ಕೋಯೇತರ ಹುಡ್ಕೋ ಧನ ಸಹಾಯ, ಬ್ಯಾಂಕ್ ಧನಸಹಾಯ ಹಾಗೂ ಪ್ರಯೋಗಾತ್ಮಕ ಕಡಿಮೆ ವೆಚ್ಚದ ಯೋಜನೆಗಳಡಿಯಲ್ಲಿ ನಿಗದಿಪಡಿಸಿದ್ದ ವಸತಿ ನಿರ್ಮಾಣದ ಗುರಿಯೆಷ್ಟು ;

(ಈ) ಈ ಗುರಿಯನ್ನು ಸಾಧಿಸಲಾಯಿತೆ ;

(ಉ) ಇಲ್ಲವಾದರೆ ಕಾರಣಗಳೇನು ;

(ಊ) 1983–84 ರ ಸಾಲಿಗೆ ಮೇಲ್ಕಂಡ ಯೋಜನೆಗಳಡಿಯಲ್ಲಿ ಸರ್ಕಾರದಿಂದ ನಿಗದಿಮಾಡಲ್ಪಟ್ಟಿರುವ ಗುರಿಯೆಷ್ಟು. ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಮತ್ತು ವಸತಿ ಮಂತ್ರಿಗಳು). —

(ಅ) 1,160·00 ಲಕ್ಷ ರೂಗಳು.

(ಆ) ಈ ಯೋಜನೆಗಳು ಪ್ರಾರಂಭವಾದಾಗಿನಿಂದ ಮೊದಲುಗೊಂಡು ಜೂನ್ 1983ನೇ ಸಾಲಿನವರೆವಿಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ ಖರ್ಚು ಮಾಡಲ್ಪಟ್ಟಿರುವ ಹಣದ ವಿವರಗಳು ಈ ಕೆಳಕಂಡಂತಿವೆ :

| | (ಲಕ್ಷ ರೂ.ಗಳಲ್ಲಿ) |
|---|---|
| ಹುಡ್ಕೋಯೇತರ ವಸತಿ ಯೋಜನೆ | 2,254·93 |
| ಹುಡ್ಕೋ ಧನ ಸಹಾಯ ವಸತಿ ಯೋಜನೆ | 3,988·32 |
| ಪ್ರಯೋಗಾತ್ಮಕ ಕಡಿಮೆ ವೆಚ್ಚದ ವಸತಿ ಯೋಜನೆ | 1,064·48 |
| ಬ್ಯಾಂಕ್ ಧನ ಸಹಾಯ ವಸತಿ ಯೋಜನೆ | 796·88 |
| ಒಟ್ಟು | 8,104·61 |

ಈ ಮೊತ್ತವು ಮುಂಚಿನ ಎಲ್ಲಾ ಯೋಜನೆಗಳ ವೆಚ್ಚಗಳನ್ನೊಳಗೊಂಡಿದೆ.

(ಇ) 1,02,000 ಮನೆಗಳು.

(ಈ) ಇಲ್ಲ.

(ಉ) ಹಣ ದೊರೆಯಲಿಲ್ಲವಾದ ಕಾರಣ 1982–83ರ ಸಾಲಿಗೆ ಹಣ ಬಿಡುಗಡೆಯಾಗಲಿಲ್ಲ.

(ಊ) 58,000 ಮನೆಗಳು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ಈ ವರ್ಷ 11.60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ಸುಮಾರು 58,000 ಮನೆಗಳನ್ನು ಕಟ್ಟುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಇದರಲ್ಲಿ ಹುಡ್ಕೋ ಮನೆಗಳೆಷ್ಟು ? ಜನತಾ ಮನೆಗಳೆಷ್ಟು ? ಪ್ರಯೋಗಾತ್ಮಕ ಕಡಿಮೆ ವೆಚ್ಚದ ಮನೆಗಳೆಷ್ಟು ?

ಶ್ರೀ ಜೆ. ಹೆಚ್. ಪಟೀಲ್.—ಮಾನ್ಯ ಒಡೆಯರಾಜ್‌ರವರೇ, ತಮ್ಮ ಕಾಲದಲ್ಲಿ ಕಟ್ಟಿಸಿದ ಹುಡ್ಕೋ ಮನೆಗಳನ್ನು ಹುಡುಕಬೇಕಾಗಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್ :—ಈಗ ಆವುಗಳ ಪತ್ತೆ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾಹಿತಿ ಇದೆ ; ಒದಗಿಸಿಕೊಡುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—1982–83ರಲ್ಲಿ 1·82 ಸಾವಿರ ಮನೆಗಳನ್ನು ಕಟ್ಟುವ ದಕ್ಕಾಗಿ ಸುಮಾರು 26 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯೆಂದು ಮಾನ್ಯ ಧರ್ಮಸಿಂಗ್ ರವರು ಹೇಳಿದ್ದಾರೆ. ಇವನ್ನು ತಾವು ಒಪ್ಪುತ್ತೀರಾ ?